ಕುವೆಂಪು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಾಲಯ, ಕರ್ನಾಟಕ ಸರ್ಕಾರದ ವಿದ್ಯಾರ್ಥಿ ವೇತನ ಮತ್ತು ಬಿ.ಸಿ.ಎಂ. ಘಟಕ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ-577 451

ದಿನಾಂಕ:04-11-2019

ಸಂಖ್ಯೆ:ಕುವಿ/ಬಿ.ಸಿ.ಎಂ ಘಟಕ/2019-20

## ಸುತ್ತೋಲೆ

ವಿಷಯ: 2019-20ನೇ ಸಾಲಿನ State Scholarship Portal (SSP) ರಡಿಯಲ್ಲಿ ವಿದ್ಯಾರ್ಥಿ ವೇತನಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿರುವ ಕುರಿತು.

ಉಲ್ಲೇಖ: ಉಮು/ಉಶಿ.ವೈಶಿ,ಐಟಿ-ಬಿಟಿ, ವಿ-ತಂ/2019-20 ದಿನಾಂಕ: 30-10-2019

ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೆಲ್ಲರೂ ತಮ್ಮ ಪ್ರತಿಭೆ ಸತತ ಶ್ರಮದಿಂದ ಶೈಕ್ಷಣಿಕವಾಗಿ ಅಭೂತಪೂರ್ವ ಸಾಧನೆಗಳನ್ನು ಮಾಡುತ್ತಾ ಬಂದಿರುವುದು ಸಂತಸದ ಸಂಗತಿ, ಪ್ರತಿಭಾಶಾಲಿ ವಿದ್ಯಾರ್ಥಿ/ನಿಯರ ವಿದ್ಯಾರ್ಜನೆಯ ಹಾದಿ ಸುಗಮಗೊಳಿಸುವ ಆಶಯದಿಂದ ರಾಜ್ಯ ಸರ್ಕಾರವು ಹಲವಾರು ವರ್ಷಗಳಿಂದ ವಿವಿಧ ಇಲಾಖೆಗಳ ವಿವಿಧ ಯೋಜನೆಗಳ ಮೂಲಕ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹದಾಯಕವಾಗಿ **ವಿದ್ಯಾರ್ಥಿವೇತನ, ಶುಲ್ಕ, ವಿನಾಯತಿ, ಶುಲ್ಕ, ಮರುಪಾವತಿ ಹಾಗೂ ಪ್ರತಿಭಾ ಪುರಸ್ಕಾರದ ರೂಪದಲ್ಲಿ ಧನಸಹಾಯ ಒದಗಿಸುತ್ತಿದೆ. ಅಲ್ಲದೇ ಹಾಸ್ಟೆಲ್ ವಾಸ್ತವ್ಯದ ಖರ್ಚನ್ನೂ ಸಹ ಮರುಪಾವತಿಸುತ್ತಿದೆ. ಅಷ್ಟೇ ಅಲ್ಲದೇ, ದಿವ್ಯಾಂಗ ಮಕ್ಕಳಿಗೂ ಸಮಾನ ಅವಕಾಶಗಳನ್ನು ನಿರ್ಮಿಸುವ ಉದ್ದೇಶದಿಂದ ಅವರಿಗೂ ಸಹ ವಿವಿಧ ಯೋಜನೆಗಳಡಿಯಲ್ಲಿ ಧನಸಹಾಯವನ್ನು ಒದಗಿಸುತ್ತಿದೆ.**

ಈ ವರ್ಷದಿಂದ ರಾಜ್ಯ ಸರ್ಕಾರವು ಮತ್ತೊಂದು ಹೆಜ್ಜೆ ಮುಂದಾಗಿ ವಿದ್ಯಾರ್ಥಿಗಳ ಆಧಾರ್ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ನೇರವಾಗಿ ಮೇಲೆ ವಿವರಿಸಿದ ಧನಸಹಾಯದ ಮೊತ್ತವನ್ನು ಪಾವತಿ ಮಾಡಲು ಉದ್ದೇಶಿಸಿ, ಇ-ಆಡಳಿತ ಕೇಂದ್ರ ಅಭಿವೃದ್ಧಿಪಡಿಸಿರುವ **"ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ"**ದ **(State Scholarship Portal)** ಮೂಲಕ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗುತ್ತಿದೆ. ಅದಕ್ಕೆ ಲಗತ್ತಿಸಬೇಕಾದ ದಾಖಲೆಗಳನ್ನು ದೃಢೀಕರಿಸಲು **"ಇ-ದೃಢೀಕರಣ" (e-Attestation)** ಎಂಬ ಸರಳ ಹಾಗೂ ತ್ವರಿತ ಪ್ರಕ್ರಿಯೆಯನ್ನೂ ಸಹ ಪರಿಚಯಿಸುತ್ತದೆ. ಈ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳು ತಮ್ಮ ಅಧ್ಯಯನ ದೃಢೀಕರಣ ಪತ್ರ, ಅಂಕಪಟ್ಟಿ, ಶುಲ್ಕಪಾವತಿ ರಸೀದಿ ಮುಂತಾದ ದಾಖಲೆ/ದಾಸ್ತಾವೇಜುಗಳನ್ನು ಒಂದು ಬಾರಿ ಇ-ದೃಢೀಕರಿಸಿಕೊಂಡಲ್ಲಿ, ಅದರ ಉಲ್ಲೇಖದ ಸಂಖ್ಯೆಯನ್ನು (reference number) ನಮೂದಿಸಿ, ಇತರೆ ಯಾವುದೇ ಉದ್ದೇಶಕ್ಕೆ ಆ ದಾಖಲೆಗಳನ್ನು ಸಲ್ಲಿಸಲು ಉಪಯೋಗಿಸಬಹುದಾಗಿದೆ. ಪದೇ ಪದೇ ವಿದ್ಯಾರ್ಥಿಗಳು ತಮ್ಮ ದಾಖಲೆಗಳನ್ನು ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಿಂದಲೋ / ಅಧಿಕಾರಿಯಿಂದಲೋ ದೃಢೀಕರಿಸಿಕೊಳ್ಳಲು ಪರಿಸ್ಥಿಯ ಕಷ್ಟವನ್ನು ಅರಿತು ಈ ನೂತನ ಇ-ದೃಢೀಕರಣ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಇಂಥಾ ಪ್ರಯತ್ನ ರಾಷ್ಟದಲ್ಲೇ ಪ್ರಥಮ ಎನ್ನುವುದು ವಿಶೇಷವಾದ ಸಂಗತಿ.

ಆದ್ದರಿಂದ ಈ ಯೋಜನೆಯ ಯಶಸ್ವಿಗೊಳ್ಳಲು ಕಾರ್ಯೋನ್ಮುಕರಾಗಬೇಕಾಗಿ ಈ ಮೂಲಕ ಕೋರಲಾಗಿದೆ.

1) ಇ-ಆಡಳಿತ ಕೇಂದ್ರದಿಂದ ಒದಗಿಸಲಾಗುವ ಎಲ್ಲಾ ಪ್ರಚಾರ ಸಾಮಗ್ರಿ ಬಳಸಿಕೊಂಡು, ಕ್ಯಾಂಪಸ್‌ಗಳಲ್ಲಿ "ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ" (State Scholarship Portal) ಹಾಗೂ "ಇ-ದೃಢೀಕರಣ" (e-Attestation) ಗಳ ಬಗ್ಗೆ ವ್ಯಾಪಕ ಪ್ರಚಾರ ಮಾಡಿ, ತಮ್ಮ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವುದು.
2) ನೀವು ಈಗಾಗಲೇ ನಮಗೆ ಕಳುಹಿಸಿಕೊಟ್ಟಿರುವ ಕೋರ್ಸ್‌ಗಳ ಮಾಹಿತಿಯನ್ನು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಭರ್ತಿ ಮಾಡಲಾಗಿದೆ. ಸದರಿ ಮಾಹಿತಿಯು ಸಮರ್ಪಕವಾಗಿದೆಯ ಎಂದು ಖಚಿತಪಡಿಸಿಕೊಂಡು ಲಿಖಿತ ದೃಢೀಕರಣ ಕಳುಹಿಸಿಕೊಡುವುದು.
3) ನಿಮ್ಮ ಕಾಲೇಜಿನಲ್ಲಿ 2 ರಿಂದ 5 ಮಂದಿ ಇ-ದೃಢೀಕರಣ ಅಧಿಕಾರಿಗಳು ನೇಮಕಗೊಂಡಿದ್ದಾರೆ ಎಂದು ಖಚಿತಪಡಿಸಿಕೊಳ್ಳುವುದು.
4) ಅಧ್ಯಯನ ದೃಢೀಕರಣ ಪತ್ರ ಹಾಸ್ಟೆಲ್ ನಿವಾಸಿ ಪ್ರಮಾಣ ಪತ್ರ ಇತ್ಯಾದಿಗಳನ್ನು ಕೂಡಲೇ ವಿದ್ಯಾರ್ಥಿಗಳಿಗೆ ವಿತರಿಸಲು ಕ್ರಮಕೈಗೊಳ್ಳುವುದು.
5) ಮಾಸ್ಟರ್ ತರಬೇತಿದಾರರಿಂದ ಎಲ್ಲಾ ಇ-ದೃಢೀಕರಣ ಅಧಿಕಾರಿಗಳಿಗೆ ಸೂಕ್ತ ತರಬೇತಿ ನೀಡಲು ಕ್ರಮಕೈಗೊಳ್ಳುವುದು.

Scanned by CamScanner

6) ಇ-ಆಡಳಿತ ಕೇಂದ್ರದಿಂದ ನಡೆಸಲಾಗುವ ಎಲ್ಲಾ ಆಡಿಯೋ-ವಿಡಿಯೋ ತರಬೇತಿಗಳಲ್ಲಿ ಕಡ್ಡಾಯವಾಗಿ ಭಾಗವಹಿಸುವಂತೆ ಎಲ್ಲಾ ಇ-ದೃಢೀಕರಣ ಅಧಿಕಾರಿಗಳಿಗೆ ಸೂಚನೆ ನೀಡುವುದು.

7) "ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ" (State Scholarship Portal) ಹಾಗೂ "ಇ-ದೃಢೀಕರಣ" (e-Attestation) ಗಳ ಬಗ್ಗೆ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡುವುದು.

8) ಬ್ಯಾಂಕ್ ಅಕೌಂಟ್‌ಗೆ ತಮ್ಮ ಆಧಾರ್ ಸಂಖ್ಯೆಯನ್ನು ಜೋಡಿಸುವಂತೆ ವಿದ್ಯಾರ್ಥಿಗಳಿಗೆ ಸೂಚನೆ ನೀಡುವುದು.

9) ವಿದ್ಯಾರ್ಥಿ ವೇತನ ಪಡೆಯಲು ವಿವಿಧ ಇಲಾಖೆಗಳ ಅರ್ಹತಾ ಮಾನದಂಡಗಳ ಬಗ್ಗೆ ವ್ಯಾಪಕ ಪ್ರಚಾರ ನೀಡುವುದು.

10) ರಾಜ್ಯ ಸರ್ಕಾರದಿಂದ ಈ ಉದ್ದೇಶಕ್ಕಾಗಿ ಬೇರೆ ಯಾವುದೇ ಪೋರ್ಟಲ್ ಇರುವುದಿಲ್ಲ ಎಂಬ ಮಾಹಿತಿಯನ್ನು ತಿಳಿಸುವುದು.

11) ದಿವ್ಯಾಂಗ ಮಕ್ಕಳು ಭಾರತ ಸರ್ಕಾರ ನೀಡುವ **"ವಿಶಿಷ್ಟ ಗುರುತಿನ ಚೀಟಿ" (Unique Identification Card) ನ್ನು ಹೊಂದಿರಬೇಕಾದ ಕಡ್ಡಾಯವಾಗಿರುವ ಕಾರಣ** ಅವರ ಪೋಷಕರಿಗೆ ಸೂಕ್ತ ಜಾಗೃತಿ ನೀಡಲು ಸೂಚಿಸುವುದು.

12) ನಿಮ್ಮ ಅಧೀನದ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿನ ಡಿಜಿಟಲ್ ಲೈಬ್ರರಿ, ಕಂಪ್ಯೂಟರ್ ಕೇಂದ್ರಗಳನ್ನು ವಿದ್ಯಾರ್ಥಿಗಳಿಗೆ ಅರ್ಜಿಗಳನ್ನು ಸಲ್ಲಿಸಲು ಅನುವುಮಾಡಿಕೊಡುವುದು.

13) ಆಯಾ ದಿನದ ಪ್ರಮಾಣಪತ್ರ ದೃಢೀಕರಣಕ್ಕಾಗಿ ಬಂದ ಅರ್ಜಿಗಳನ್ನು ಅದೇ ದಿನವೇ ಇ-ದೃಢೀಕರಣ ತಂತ್ರಾಂಶದಲ್ಲಿ ವಿಲೇಗೊಳಿಸಲು ಎಲ್ಲಾ ಇ-ದೃಢೀಕರಣ ಅಧಿಕಾರಿಗಳಿಗೆ ಕಟ್ಟುನಿಟ್ಟಾದ ಆದೇಶ ಹೊರಸುವುದು.

14) ಯಾವುದೇ ಸಂದೇಹಗಳಿದ್ದಲ್ಲಿ, ಆಯಾ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಲು ಸೂಚಿಸುವುದು.

15) ಯಾವುದೇ ಅರ್ಹ ವಿದ್ಯಾರ್ಥಿ ಮೇಲೆ ವಿವರಿಸಿದ ತಂತ್ರಾಂಶದ ಮೂಲಕ ದಾಖಲೆಗಳನ್ನು ದೃಢೀಕರಿಸಿಕೊಳ್ಳಲು ಹಾಗೂ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಸಾಧ್ಯವಾಗದೇ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಸಾಧ್ಯವಾಗದಿದ್ದಲ್ಲಿ, ಆಯಾ ಕಾಲೇಜಿನ ಪ್ರಾಂಶುಪಾಲರನ್ನು ಹಾಗೂ ಇ-ದೃಢೀಕರಣ ಅಧಿಕಾರಿಗಳನ್ನೇ ನೇರವಾಗಿ ಹೊಣೆ ಮಾಡಲಾಗುವುದು.

ಒಟ್ಟಿನಲ್ಲಿ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಸಿದ್ದರಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಲು ಅನುಕೂಲವಾಗುವಂತೆ ಸೂಕ್ತ ಸಹಕಾರ ನೀಡುವ ಬಗ್ಗೆ ಖಚಿತಪಡಿಸಿಕೊಳ್ಳಲು ನೀವು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವಿರೆಂದು ಹಾಗೂ ಈ ಬಗ್ಗೆ ಯಾವುದೇ ದೂರುಗಳು ಸ್ವೀಕೃತವಾಗದಂತೆ ಎಚ್ಚರವಹಿಸಬೇಕೆಂದು ಈ ಮೂಲಕ ಕೋರಲಾಗಿದೆ.

4/11/19

ಕುಲಸಚಿವರು

ಕುಲಸಚಿವ
ಕುವೆಂಪು ವಿಶ್ವವಿದ್ಯಾಲಯ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ, ಕರ್ನಾಟಕ.

Scanned by CamScanner